ಅನ್ನಿಸಿತು. ಸಮಯವೂ ಇರಲಿಲ್ಲ. ಆಗ ದಿಲೀಪನೇ ಮದುವೆ ಹಾಲ್‌ನಿಂದಲೇ ಓಡಿ ಹೋಗುವ ಯೋಜನೆ ಹಾಕಿ, ತಾನು ಬರುವುದಾಗಿ ತಿಳಿಸಿದ."

"ಸಮಯ ಮತ್ತು ವಾಹನದ ಸಂಖ್ಯೆಯನ್ನು ಮದುವೆ ದಿನ ತಿಳಿಸುವುದಾಗಿ ಹೇಳಿ, ಬಾಚಣಿಗೆಯಲ್ಲಿ ಅದನ್ನು ಬರೆದಿರಿಸಿದ, ಅಲ್ವೇ?" ಕರಮಚಂಚ ಮಧ್ಯೆ ಬಾಯಿ ಹಾಕಿದ.

"ಬಾಚಣಿಗೆಯಲ್ಲಿ? ಅದೆಲ್ಲಿತ್ತು?" ನನ್ನ ಪ್ರಶ್ನೆ.

"ಬಿದ್ದಪ್ಪ, 1 ಮತ್ತು 2 ನಂತರ ಒಂದು ಚುಕ್ಕಿ ಇತ್ತಲ್ಲವೇ? ಅದು ಸಮಯವೆಂದು ನಾನು ಆಗಲೇ ಊಹಿಸಿದೆ. 12.34 ಸಮಯ. ಉಳಿದದ್ದು ಕಾರಿನ ಸಂಖ್ಯೆ. ನಾವು ಕೆಳಗೆ ಬಂದಾಗ, ಅಲ್ಲಿ ಕಾರೊಂದರ ಚಾಲಕ ಪಾರ್ಕಿಂಗಿಗೆ ಜಗಳವಾಡುತ್ತಿದ್ದನಲ್ಲವೇ? ಆ ಕಾರಿನ ಸಂಖ್ಯೆ ಎಮ್.ಎಚ್. 5678! ಆದರೆ, ಸೋಜಗ ಗೊತ್ತೇ? ಅದರ ಮುಂಭಾಗದಲ್ಲಿ ಇದ್ದ ಸಂಖ್ಯೆ 2847! ಹಿಂದಿನದ್ದು ನಕಲಿ ಸಂಖ್ಯೆ! ಸುಳಿವು ಎಂದೂ ಗೊತ್ತಾಗಬಾರದೆಂದು ಆ ಸಂಖ್ಯೆ ಬಳಸಿರಬೇಕು. ಅದಕ್ಕೇ ನಾನು ಪೊಲೀಸರಿಗೆ 2847ರ ಸಂಖ್ಯೆಯ ಕಾರು ನಿಲ್ಲಿಸಲು ಹೇಳಿದ್ದು."

"ಓಹ್! ಈ ಕಾರನ್ನು ಸಿಸಿಟೀವಿಯಲ್ಲಿ ಕಂಡಿದ್ದೆವಲ್ಲ. ಆದರೆ, ಆ ಬಾಚಣಿಗೆ ಇರಿಸಿದ್ದು ಯಾರು?"

"ನಿಸ್ಸಂಶಯವಾಗಿ ವಿಶು ಅಥವಾ ಆತನ ಸಹಚರ. ಆ ಬಾಚಣಿಗೆ ಕಂಡಾಗಲೇ ಊಹಿಸಿದ್ದೆ. ಯಾಕೆ ಗೊತ್ತೆ? ಆ ಬಾಚಣಿಗೆಯಲ್ಲಿ ಚಿಕ್ಕದಾಗಿ ಇದ್ದ ಬರಹ —ಹೋಟೆಲ್ ಅಜಂತ! ಅಂದರೆ, ಆ ಬಾಚಣಿಗೆ ಆ ಹೋಟೆಲಿನಲ್ಲಿ ಕಾಂಪ್ಲಿಮೆಂಟ್ ಆಗಿ ಸಿಕ್ಕಿದ್ದು. ವಿಶುವಿನಲ್ಲೂ ಅದೇ ಬಾಚಣಿಗೆಯಿತ್ತು. ಅಜಂತ ದುಬಾರಿ ಹೋಟೆಲ್. ಬಡವ ದಿಲೀಪ್ ಅಲ್ಲಿ ಹೋಗಿರಲು ಸಾಧ್ಯವಿಲ್ಲ. ಜೊತೆಗೆ ಕಾಕತಾಳೀಯವಾಗಿ ಇನ್ನೊಬ್ಬ ವ್ಯಕ್ತಿಯೂ ಅಂತಹ ಬಾಚಣಿಗೆ ತಂದಿರುವ ಕಡಿಮೆ ಅನ್ನಿಸಿತು."

"ಆದರೆ, ಆತ ನೇರವಾಗಿ ರಾಖಿಯೊಡನೆಯೇ ಅದನ್ನು ಹೇಳಬಹುದಿತ್ತಲ್ಲ. ರಾಖಿಗೆ ಆ ಗೂಢ ಸಂಖ್ಯೆಗಳು ಅರ್ಥವಾಗಿದ್ದು ಹೇಗೆ?"

"ನಾನು ಹೇಳ್ತೀನಿ, ಸಾರ್. ನನ್ನನ್ನು ಭೇಟಿಯಾಗಲೂ ಬಾರದು, ಫೋನು ಮಾಡಲೂ ಬಾರದು ಎಂದು ನಾನು ವಿಶು ಮಾಮನಿಗೆ ಹೇಳಿದ್ದೆ. ನನ್ನ ತಂದೆಗೆ ಮಾಮನ ಮೇಲೆ ಮೊದಲೇ ಅನುಮಾನ. ಅದಕ್ಕೆ ದಿಲೀಪ್ ತಾನು ಬಾಚಣಿಗೆಯಲ್ಲಿ ಸಮಯ ಮತ್ತು ವಾಹನದ ಸಂಖ್ಯೆ ಬರೆದಿಡಲು ವಿಶುವಿಗೆ ಹೇಳುವುದಾಗಿ ಸಾಯಿರಾ ಮೂಲಕ ತಿಳಿಸಿದ. ದಿಕ್ಕು ತಪ್ಪಿಸಲು ವಾಹನದ ಸಂಖ್ಯೆಯನ್ನೂ 5678 ಎಂದು ಆರಿಸಿಕೊಂಡ!" ರಾಖಿ ಹೇಳಿದಳು.

"ಹಾಗಿದ್ದರೆ ಸಾಯಿರಾಗೆ ನಿನ್ನ ಯೋಜನೆ ಗೊತ್ತಿತ್ತು?"

"ಹೌದು. ಆಕೆಯ ಮೇಲೆ ಅನುಮಾನ ಬರಬಾರದೆಂದು ನಿಜವಾಗಿಯೂ ನಿದ್ರೆ ಮಾತ್ರೆ ಕುಡಿಸಿದೆ!"

"ಜೊತೆಗೆ, ಗೊಂದಲ ಸೃಷ್ಟಿಸಲು ನೆಕ್ಲೇಸ್ ಕಳ್ಳತನದ ನಾಟಕ ಆಡಿದ್ದೀರಲ್ಲ!" ಕರಮಚಂದ ಹೇಳಿದ.

"ನಿಮ್ಗೆ ಹೇಗೆ ಗೊತ್ತಾಯ್ತು?" ರಾಖಿಯ ಪ್ರಶ್ನೆ.

"ತೀರಾ ಸರಳ. ಗೊಂದಲ ಸೃಷ್ಟಿಸಿದರೆ, ನಿನಗೆ ತಪ್ಪಿಸಿಕೊಳ್ಳಲು ನೆರವಾಗುತ್ತದೆಂದು ಸುಲಭವಾಗಿ ಊಹಿಸಬಹುದು. ಹಿಂದುಗಡೆ ನಿಂತಿದ್ದ ಕಾರಿನ ಸಂಖ್ಯೆ ಕಂಡಾಗಲೇ ನನಗೆ ಅನುಮಾನವುಂಟಾಯಿತು. ಜೊತೆಗೆ, ಇಲ್ಲೇ ಸಮೀಪದ ಅಂಗಡಿಯಲ್ಲಿ ಹಗ್ಗ ಖರೀದಿ ಮಾಡಿದ್ದು ಅದೊಂದು ತಡವಾಗಿ ಮಾಡಿದ ಯೋಚನೆ ಎನ್ನುವುದನ್ನು ಸೂಚಿಸಿತು. ಅದು ವೃತ್ತಿಪರ ಕಳ್ಳರ ಕೈವಾಡವಲ್ಲವೆನ್ನುವುದನ್ನು ಖಚಿತಪಡಿಸಿತು."

"ಆ ನೆಕ್ಲೇಸ್ ಎಲ್ಲಿದೆ?" ಪೂವಯ್ಯ ಅರಚಿದ.

ಕರಮಚಂದನ ಸೂಚನೆಯ ಮೇರೆಗೆ ಪೊಲೀಸ್ ಆ ವೈನ್ ಸ್ಟೋರಿಗೆ ಹೋಗಿ ಅಪರಿಚಿತ ಆಸಾಮಿಯನ್ನು ಕರೆತಂದರು. ಆತನಿಂದ ನೆಕ್ಲೇಸ್ ವಶಪಡಿಸಿಕೊಳ್ಳಲಾಯಿತು.

"ರಾಖಿ, ನೀನು ಮದುವೆ ಮಂಟಪಕ್ಕೆ ಬಾ. ಮುಹೂರ್ತ ಮೀರಿದೆ." ಪೂವಯ್ಯ ಅಬ್ಬರಿಸಿದ.

"ನಾನು ದಿಲೀಪನೊಡನೆ ಹೋಗುತ್ತೇನೆ" ಎಂದ ಆಕೆ, ಪೊಲೀಸ್ ಜೀಪಿನ ಹಿಂದಿದ್ದ ಕಾರನ್ನು ಏರಿದಳು. ಅದರಲ್ಲಿದ್ದ ದಿಲೀಪ್ ನಮ್ಮತ್ತ ಕೈ ಬೀಸಿ, ಕಾರಿನ ಯಂತ್ರಕ್ಕೆ ಜೀವ ತಂದ. ಅಷ್ಟರಲ್ಲಿ ಮದುವೆಯ ಹುಡುಗನ ಕಡೆಯವರು ಜೋರಾಗಿ ಪೂವಯ್ಯನ ಜೊತೆ ವಾಗ್ವಾದಕ್ಕಿಳಿದರು. ನಾವು ಸದ್ದಿಲ್ಲದೆ ಅಲ್ಲಿಂದ ಜಾಗ ಖಾಲಿ ಮಾಡಿದೆವು. ●